


ತಗ್ಗರ ಕಾಳಿ ಆರಾಧನೆಯ ಚಿತ್ರ

## ತಗ್ಗರ ದಸರಾ

ಕರ್ನಾಟಕದಲ್ಲಿ ನೆಲೆಸಿದ ಗಂಟಿಚೋರ ಸಮುದಾಯವರು ಮೂಲತಃ ಶಕ್ತಿ ಆರಾಧನೆಯವರು. ಇವರು ನವರಾತ್ರಿಯಲ್ಲಿ ವಿಶೇಷವಾಗಿ ಲಕ್ಕವ್ವ, ಎಲ್ಲವ್ವ, ಕರಿಯಮ್ಮನ ಆರಾಧನೆಗಳನ್ನು ಮಾಡಿ ತುಡುಗು ಮಾಡಲು ಹರಕೆ ಕೇಳುವ ಸಂಪ್ರದಾಯವೂ ಇದೆ. ಇನ್ನು ಉತ್ತರ ಭಾರತದ ಠಕ್ಕರೂ ಕೂಡ ಕಾಳಿ ಆರಾಧಕರು. ಇವರೂ ಕೂಡ ದಸರಾ ಸಂದರ್ಭದಲ್ಲಿ ವಿಶೇಷ ಆಚರಣೆಗಳನ್ನು ಮಾಡುತ್ತಾರೆ. ಹರ್ಪರ್ಸ್ (Harpers) ಎನ್ನುವ ಬ್ರಿಟಿಷ್ ಅಧಿಕಾರಿಯೊಬ್ಬ 1858ರಲ್ಲಿ ಬರೆದ ರೇಖಾಚಿತ್ರವೊಂದು ಲಭ್ಯವಿದೆ. ಇದರಲ್ಲಿ ರುಂಡಮಾಲೆ ಹಾಕಿದ ಕಾಳಿಯನ್ನು ಹೊತ್ತು ಮೆರವಣಿಗೆ ಮಾಡುತ್ತಿದ್ದಾರೆ. ಇದರ ಅಡಿಬರಹ 'ತಗ್ಗರ ಕಾಳೀಪೂಜಾ' ಎಂದಿದೆ. ಜನರು ಉನ್ಮತ್ತರಾಗಿ, ಅರೆಬರೆ ಬಟ್ಟೆ ತೊಟ್ಟು, ಡೋಲು ಬಾರಿಸುತ್ತಾ, ಕತ್ತಿ, ಗುರಾಣಿ ಮುಂತಾದ ಆಯುಧಗಳನ್ನು ಎತ್ತಿ ಹಿಡಿದು ಕುಣಿಯುತ್ತಿರುವ ಚಿತ್ರವಿದೆ. ಇದೊಂದು ತಗ್ಗರ ದಸರಾ ಆಚರಣೆಯನ್ನು ದೃಶ್ಯೀಕರಿಸುವ ಪ್ರಯತ್ನದಂತೆ ಕಾಣುತ್ತದೆ.

ನುಡಿಯನ್ನು ಹಿನ್ನೆಲೆಯಾಗಿ ಕೂಗುವರು. ದೀವಟಿಗೆಯ ಹಿಂದೆ ಸುಮಂಗಲೆಯರ ಕಳಸದಾರತಿ ಇರುತ್ತದೆ. ಆಕೆಯೇ ದೀವಟಿಗೆಗೆ ದಾರಿಯಲ್ಲಿ ತುಪ್ಪ ಹಾಕಿ ಉರಿಸುವುದಲ್ಲದೇ ದೀವಟಿಗೆ ಹಿಡಿದವರನ್ನು ದೇವರ ಸಮಾನವೆಂದು ಭಾವಿಸುವಳು.

### ಜನಪದ ಗೀತೆಗಳಲ್ಲಿ ಬನ್ನಿ ಹಬ್ಬ

ಮಾನೌಮಿ ಪದಗಳಲ್ಲದೆ ಜನಪದ ಗೀತ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಬನ್ನಿಹಬ್ಬ ಅಥವಾ ನವರಾತ್ರಿಯ ಕುರಿತು ಪದಕಟ್ಟಿದ್ದಾರೆ. ಇಂತಹ ಪದಗಳನ್ನೇ ಪ್ರತ್ಯೇಕವಾಗಿ ಸಂಗ್ರಹಿಸಬಹುದಾದಷ್ಟಿವೆ. ಈ ಪದಗಳೂ ಕೂಡ ಜನಪದರ ಬನ್ನಿ ಹಬ್ಬದ ಚರಿತ್ರೆ ಮತ್ತು ವರ್ತಮಾನವನ್ನು ಸಾಂಕೇತಿಸುತ್ತಿವೆ. ಪಾಂಡವರು ಬಿಲ್ಲು–ಬಾಣಗಳನ್ನು ಬನ್ನಿ ಮರದಲ್ಲಿ ಬಚ್ಚಿಡುತ್ತಾರೆ ಎನ್ನುವ ನಂಬಿಕೆ ಇದೆ. ಹೀಗಾಗಿ ಜನಪದ ಹಾಡುಗಾರ್ತಿ:

ಬನ್ನಿಯ ಉಡಿಯಾಗ ಪಾಂಡವರು|
ಆಯುಧಗಳ ಇಟ್ಟಾರೆ
ಯಾರು ಬಂದರೂ ಕೊಡಬೇಡ |
ಹಡದಮ್ಮ ಅರ್ಜುನ ಬಂದರ ಕೊಡಬೇಕ ||
ಕಲ್ಲ ಕಡಬ ಮಾಡಿ ಮುಳ್ಳ ಶ್ಯಾವಿಗಿ ಮಾಡಿ
ಬನ್ನಿಯ ಎಲಿಯ ಎಡಿಮಾಡಿ | ಪಾಂಡವರು
ಉಂಡು ಹೋಗ್ಯಾರೋ ವನವಾಸಕೊ.
ಬನ್ನಿಯ ಗಿಡದಾಗ ಬೆಳ್ಳಿಯ ಗುಡಗಡಿ
ಬಂಗಾರ ಚಿಲುಮಿ ನವರತನೊ | ಪಾಂಡವರು
ಸೇದಿ ಹೋಗ್ಯಾರೋ ವನವಾಸಕೊ

ಎಂದು ಪದಕಟ್ಟಿ ಹಾಡುತ್ತಾಳೆ. ಪಾಂಡವರ ಬಗೆಗೆ ಹಲವು ತ್ರಿಪದಿಗಳಿರುವುದನ್ನು ಗಮನಿಸಬಹುದು. ಬನ್ನಿ ಹಬ್ಬದ ತಯಾರಿ, ಆಚರಣೆ, ಮುಂತಾದ ಸಂಗತಿಗಳೂ ಜನಪದ ಹಾಡುಗಳಲ್ಲಿ ಇರುವುದನ್ನು ನೋಡಬಹುದು.

ಬನ್ನಿ ಮುಡಿಯುದು ಬಂತು
ಬಂಗಾರ ಕೊಡುವುದು ಬಂತು
ಬಂದ ನನಕಾಲ ಹಿಡದಾನ | ನನ್ನಣ್ಣ
ಬಂಗಾರ ಮಾಲ ನನಗಿರಲಿ||
ಮಾನೋವಿ ಬಂತಂತ ಹೇಳಿ ನಾ ಕಳಿವೇನಿ
ಕ್ಯಾದಿಗಿ ದಂಡಿ ಹೆಣದೀನಿ | ಕಂದವ್ವ
ದಸರ್ಯಾಕ ಹೊಂಟಾರ ಧನಿಯಾರು||

ಬನ್ನಿ ಹಬ್ಬಕ್ಕೆ ವಿಶೇಷವಾಗಿ ಹಲವು ಪ್ರದೇಶಗಳಲ್ಲಿ ಕೋಲಾಟದ ಸಿದ್ಧತೆ ನಡೆಯುತ್ತದೆ. ಕರ್ನಾಟಕದ ಹಲವು ಭಾಗಗಳಲ್ಲಿ ಕೋಲಾಟದ ಸ್ಪರ್ಧೆಗಳೂ ನಡೆಯುತ್ತವೆ. ಹೀಗೆ ನಡೆಯುವ ಕೋಲಾಟದ ಪದಗಳಲ್ಲಿ ಬನ್ನಿ ಹಬ್ಬದ ಕುರಿತು ವರ್ಣನೆಯ ಪದಗಳಿರುವುದು ವಿಶೇಷವಾಗಿದೆ.

ಬನ್ನಿ ಮುಡಿಯುನ ಬಾರ ಕೋಲು ಕೋಲ |
ಚಿನ್ನ ತರವುನ ಬಾರ ಕೋಲು ಕೋಲ ||ಪ||
ಊರ ಸೀಮೆಯ ದಾಟಮ ಕಾಡ ಗಡಿಯನು ಸೇರಿ
ಕಾಡ ಸಂಪತ್ತ ತರಬನ್ನಿ || ಕೋಲು ಕೋಲ ||1||
ಬೆಳೆದ ಬೆಳಸಿಗೆ ಬನ್ನಿ, ಭೂಮಿ ತಾಯಿಗೆ ನಿನ್ನ
ನಾಡ ಸಂಪತ್ತ ಬೆರೆ ಬನ್ನಿ || ಕೋಲು ಕೋಲ ||2||
ಅರಸನ ಅಂಗಳಕ, ಸರಸ ರಂಗ ಹೊಯ್ದು
ಹೊರಸಿ ತಂದಾರ ಸಿರಿ ಬನ್ನಿ || ಕೋಲು ಕೋಲ ||3 ||
ದೇವ ದೇವರ ಬನ್ನಿ, ದೇವ ದೈವದ ಬನ್ನಿ
ನಾವು ಮುಡಿವೂದು ನಮ ಬನ್ನಿ ||
ಕೋಲು ಕೋಲ ||4||
ಹಡೆದ ತಾಯಿಗೆ ಬನ್ನಿ, ಹಡೆದ ತಂದೆಗೆ ಬನ್ನಿ
ಪಡೆದ ಗಂಡನಿಗೆ ನಮಬನ್ನಿ || ಕೋಲು ಕೋಲ ||5||
ಚಿನ್ನದ ಕೈಗಡಗ, ಚನ್ನೇರು ಇಟಗೊಂಡು
ಚಿನ್ನದಾಭರಣ ನಡ ಬಾಗಿ || ಕೋಲು ಕೋಲ ||6||
ಗೆಜ್ಜೆ ಹೆಜ್ಜೀ ಹಾಕಿ, ಗುಜ್ಜೇರು ಕುಣಿದಾರ
ವಜ್ಜರ ವಡ್ಯಾಣ ಛಿಲ ಛಿಲ || ಕೋಲ ಕೋಲ ||7||
ನಾವು ಕುಣಿಯುಣ ಬನ್ನಿ, ಹ್ಯಾಂವ ಮರೆಯುಣ ಬನ್ನಿ
ಜೀವ ಒಂದಾಗಿ ಇರಬನ್ನಿ || ಕೋಲು ಕೋಲ ||8||
ಇಂದ ಮುಡಿಯುವ ಬನ್ನಿ, ಮುಂದೆ ಮಗ ಹೊನ್ನಾಗಿ
ಕುಂದಣದಾರೂತಿ ಬೆಳಗೂದಕ ||
ಕೋಲು ಕೋಲ ||9||

ಹೀಗೆ ಬನ್ನಿ ಹಬ್ಬವನ್ನು ಕೋಲಾಟದ ಪದಗಳಲ್ಲಿ ಹಿಡಿದಿಡಲು ಜನಪದ ಸಮುದಾಯಗಳು ಪ್ರಯತ್ನಿಸಿವೆ. ಈ ನೆನಪನ್ನು ನಿರಂತರಗೊಳಿಸಲು ಬನ್ನಿ ಹಬ್ಬಗಳನ್ನು ವಾರ್ಷಿಕವಾಗಿ ಪುನರಾವರ್ತನೆ ಮಾಡುತ್ತಾರೆ.

ಕರ್ನಾಟಕದಾದ್ಯಂತ ಬಹುರೂಪಗಳಲ್ಲಿ ಆಚರಣೆಗೊಳ್ಳುವ ದಸರಾಗಳಲ್ಲಿ ಕೆಲವು ಸಮಾನ ಎಳೆಗಳಿವೆ. ಅದರಲ್ಲಿ ಮುಖ್ಯವಾದುದು, ಪಾಂಡವರು ಬನ್ನಿ ಮರದಲ್ಲಿ ಬಿಲ್ಲು–ಬಾಣಗಳನ್ನು ಅಡಗಿಸಿದ್ದರು ಎನ್ನುವುದು. ಈ ಕಥನ ವ್ಯಾಪಕವಾಗಿ ಹರಡಿರುವ ಕಾರಣ ಬಹುಪಾಲು ಗ್ರಾಮಗಳಲ್ಲಿ ದಸರಾ ಹಬ್ಬದಂದು ಇದರ ಅನುಕರಣೆ ಮಾಡುತ್ತಾರೆ.

'ಬನ್ನಿ ಮುಡಿಯುವ' ಪದ 'ಹೂ ಮುಡಿಯುವ' ಪದದಂತೆ ಸ್ತ್ರೀವಾಚಕವಾಗಿದೆ. ಕೆಲವು ಸಮಾನ ಅಂಶಗಳನ್ನು ಒಳಗೊಂಡು ಸಮುದಾಯಗಳು ಹಲವು ಕುಲಮೂಲ ಮತ್ತು ಪ್ರಾದೇಶಿಕ ವೈವಿಧ್ಯಗಳನ್ನೂ ಸೇರಿಸಿಕೊಂಡಿವೆ. ಇಲ್ಲಿ ನಾನು ಕೆಲವು ಆಯ್ದ ಸಮುದಾಯಗಳ ಆಚರಣೆಯನ್ನು ಮಾತ್ರ ಉಲ್ಲೇಖಿಸಿರುವೆ. ಎಲ್ಲಾ ಜನ ಸಮುದಾಯಗಳು ತಮ್ಮ ಕುಲಕಥನಗಳ ನೆಲೆಯಿಂದ ಬನ್ನಿ ಹಬ್ಬವನ್ನು ವಿಶಿಷ್ಟವಾಗಿ ಆಚರಿಸುತ್ತಿವೆ. ಹಾಗಾಗಿ ಕರ್ನಾಟಕದಲ್ಲಿ ಒಂದು ದಸರಾ ಇಲ್ಲ. ಹತ್ತಾರು ವಿಧದ ಹಲವು ನೆಲೆಯ ಬನ್ನಿ ಹಬ್ಬಗಳಿವೆ. ಇದು ಬಹುತ್ವದ ಗುರುತಾಗಿದೆ. ಇದರಲ್ಲಿ ಇಂದಿಗೂ ಪ್ರಸ್ತುತವೆನ್ನಿಸುವ ಆಚರಣೆ ಮತ್ತು ನಂಬಿಕೆಗಳನ್ನು ಉಳಿಸಿಕೊಂಡು ಮೌಢ್ಯವೆನ್ನಿಸುವ ಆಚರಣೆಗಳನ್ನು ಕೈಬಿಡಬಹುದಾಗಿದೆ. ಎಷ್ಟೋ ಇಂತಹ ಮೌಢ್ಯಗಳನ್ನು ಜನಪದ ಸಮುದಾಯಗಳು ಕಳಚಿಕೊಂಡು ಹೊಸತನ್ನು ಧರಿಸಿ ಮುನ್ನಡೆದಿವೆ.

ಪ್ರತಿಕ್ರಿಯಿಸಿ: feedback@sudha.co.in